# ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ ಕನಕಪುರ

## ಸಿ.ಸಿ ನಂಃ 848/2016

| | | | |
|---|---|---|---|
| **ಚಾಸಾ ಃ** | **1** | **ಪ್ರಾಸಾಃ-** | **1** |

| | |
|---|---|
| ಹೆಸರು | ಸುನಂದ |
| ಗಂಡನ ಹೆಸರು | ಮಹಾಲಿಂಗಯ್ಯ |
| ವಯಸ್ಸು | ಮೇಜರ್ |
| ಉದ್ಯೋಗ | ಪ್ಯಾಕ್ಟರಿ ಕೆಲಸ |
| ವಿಳಾಸ | ತುಂಗಣಿ |

**ದಿಃ 04.02.2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನ್ಯಾಯಾಲಯದ ಮುಂದೆ ಇರುವ 1 ಮತ್ತು 2ನೇ ಆರೋಪಿತರು ನನಗೆ ಚಿಕ್ಕಮ್ಮ ಮತ್ತು ಚಿಕ್ಕಮ್ಮ ಆಗಬೇಕು. ಚಾಸಾ 2 ಮತ್ತು 5 ರವರ ಪರಿಚಯವಿದೆ.

4 ವರ್ಷಗಳ ಹಿಂದೆ ಆರೋಪಿತರ ವಿರುದ್ಧ ದೂರು ನೀಡಿದೇನೆ. ನಮ್ಮ ಮನೆಯ ಹಿಂಭಾಗದ ಪಿತ್ತಲಿನಲ್ಲಿ ಕಸವನ್ನು ಸ್ವಚ್ಛಗೊಳಿಸುವಾಗ ಬೆಳಿಗ್ಗೆ 08.30 ರ ಸಮಯದಲ್ಲಿ, ಆರೋಪಿತರು ಕಸವನ್ನು ಆರೋಪಿತರು ಪಕ್ಕದಲ್ಲಿ ಹಾಕಬೇಡಿ ಎಂದು ಹೇಳಿದರು. ನಾನು ಬೆಂಕಿ ಹಾಕಿದರೆ ಏನು ಆಗುವುದಿಲ್ಲ ಎಂದು ಹೇಳಿದೆನು. 1ನೇ ಆರೋಪಿ ನನ್ನ ಜುಟ್ಟನ್ನು ಹಿಡಿದು ಎಳೆದಾಡಿ ನನಗೆ ಹೊಡೆದನು. 2ನೇ ಆರೋಪಿ ಹಂಚಿನಿಂದ ನನ್ನ ತಲೆಗೆ ಹೊಡೆದು ರಕ್ತಗಾಯಪಡಿಸಿದರು.

ದೂರಿನಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಪಿಯಾರ್ದನ್ನು ನಿ ಪಿ 1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ 1 (ಎ) ಎಂದು ಗುರುತಿಸಲಾಯಿತು. ಪೊಲೀಸರು ಸ್ಥಳಕ್ಕೆ ಬಂದು ವಿಚಾರಣೆ ಮಾಡಿ ಹಂಚನ್ನು ತೆಗೆದುಕೊಂಡು ಹೋದರು. ಕೃತ್ಯ ಸ್ಥಳವನ್ನು ನನ್ನ ಮಗಳು ತೋರಿಸಿದರು. ಮಹಜರ್ ನಲ್ಲಿನ ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದರ ಮೇರೆಗೆ ಅದನ್ನು ನಿ ಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ 2 (ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷಿ ನುಡಿದಿರುವುದರಿಂದ ಅವರನ್ನು ಭಾಗಾಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಎಪಿಪಿ ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.**

**ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಪೊಲೀಸರಿಗೆ ಕೃತ್ಯ ಸ್ಥಳ ನಾನೇ ತೋರಿಸಿದೆ ಎಂದರೆ ಸರಿ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಹೊಡೆದ ಹಂಚನ್ನು ತೋರಿಸಿ ಇದರಿಂದ ಆರೋಪಿ ನನ್ನ ತಲೆಗೆ ಹೊಡೆದನು ಎಂದರೆ ಸರಿಯಲ್ಲ. ಸದರಿ ಹಂಚನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ.ಕಾಮೇಶ್ ವಕೀಲರಿಂದಃ**

ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ 1 ನೇ ಆರೋಪಿಗೆ ಒಟ್ಟು ಕುಟುಂಬದ ಜಮೀನು ಇದೆ ಎಂದರೆ ಸರಿ. ನನ್ನ ತಂದೆ ಮತ್ತು ಚಿಕ್ಕಪ್ಪ ಕುಟುಂಬದ ಆಸ್ತಿಯನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ದುರ್ಗೇಗೌಡ ಎಂಬುವರಿಗೆ ತನ್ನ ಭಾಗದ ಹಿಸ್ಸೆ ಸ್ವತ್ತನ್ನು ನನ್ನ ತಂದೆ ಮಾರಿ ಕೊಂಡಿದ್ದಾರೆ ಎಂದರೆ ಸರಿ. ನನ್ನ ಚಿಕ್ಕಪ್ಪ ತನ್ನ ಹಿಸ್ಸೆ ಸ್ವತ್ತನ್ನು ಮಾರಾಟ ಮಾಡಿಕೊಂಡಿಲ್ಲ ಎಂದರೆ ಗೊತ್ತಿಲ್ಲ.

25 ವರ್ಷಗಳ ಹಿಂದೆ ನನ್ನ ಮದುವೆ ಆಗಿದೆ. ನನ್ನ ಗಂಡನ ಮನೆ ತಿಗಳರಹೊಸಹಳ್ಳಿಯಲ್ಲಿದೆ. ನನ್ನ ತವರು ಮನೆ ಮತ್ತು ಗಂಡನ ಮನೆ 30 ಕಿ.ಮೀ. ದೂರದಲ್ಲಿದೆ ಎಂದರೆ ಸರಿ.

ನಾನು ಅವಿದ್ಯಾವಂತೆ.

ದೂರನ್ನು ಯಾರು ಬರೆದರು ಎಂದು ಗೊತ್ತಿಲ್ಲ. ನಾನು ದೂರನ್ನು ಹೇಳಿ ಬರೆಸಿಲ್ಲ. ತಲೆಗೆ ಹೊಡೆದಾಗ ರಕ್ತ ನನ್ನ ಸೀರೆಯ ಮೇಲೆ ಬಿತ್ತು. ಸದರಿ ರಕ್ತ ಕಲೆಯಾದ ಸೀರೆಯನ್ನು ಪೊಲೀಸರಿಗೆ ನೀಡಿಲ್ಲ.

ದೂರನ್ನು ಸಂಜೆ 05.00 ಗಂಟೆ ಸಮಯದಲ್ಲಿ ನೀಡಿದೆನು. ಆಸ್ಪತ್ರೆಯಿಂದ ಚಿಕಿತ್ಸೆ ಪಡೆದು ನಂತರ ದೂರು ದಾಖಲಿಸಿದೆನು. ಬೆಳಿಗ್ಗೆ 10.00 ಗಂಟೆಗೆ ಆಸ್ಪತ್ರೆಗೆ ಹೋದೆನು. ಸಂಜೆ 04.30 ರ ತನಕ ಆಸ್ಪತ್ರೆಯಲ್ಲಿ ಇದ್ದೆನು. ಚಿಕಿತ್ಸೆ ನೀಡಿದ ವೈದ್ಯರಿಗೆ ಗಾಯ ಆದ ಕಾರಣ ತಿಳಿಸಿದೆನು. ಗಾಯದ ಪ್ರಮಾಣ ಪತ್ರವನ್ನು ಪ್ರಕರಣಕೋಸ್ಕರ ಸೃಷ್ಟಿ ಮಾಡಿಸಿಕೊಂಡಿದೇನೆ ಎಂದರೆ ಸರಿಯಲ್ಲ.

ಮಹಜರ್ ಗೆ ಇಬ್ಬರು ಸಾಕ್ಷಿದಾರರು ಇದ್ದರು. ಎಷ್ಟು ಗಂಟೆಯಿಂದ ಮಹಜರ್ ಬರೆದರು ಎಂದು ಈಗ ಗೊತ್ತಿಲ್ಲ. ಮಹಜರ್ ನ್ನು ನನಗೆ ಓದಿ ಹೇಳಲಿಲ್ಲ. ಮಹಜರ್ ಗೆ ಎಷ್ಟು ಜನ ಸಹಿ ಮಾಡಿದರು ಎಂದು ನಾನು ನೋಡಿಲ್ಲ.

ಸಂಪನ್ ದೊಡ್ಡಿ ಮತ್ತು ತುಂಗಣಿ 1 ಕಿ.ಮೀ. ದೂರದಲ್ಲಿದೆ. ಹಿತ್ತಲಿನಲ್ಲಿ ಕಸ ಸ್ವಚ್ಛಗೊಳಿಸುತ್ತಿದೆ ಎಂದು ಪಿರ್ಯಾದಿನಲ್ಲಿ ಹೇಳಿ ಬರೆಸಿದೇನೆ. ಕಸ ಸ್ವಚ್ಛಗೊಳಿಸುತ್ತಿದೆ ಎಂದು ಹೇಳಲಾಗುವ ಜಾಗ 1 ನೇ ಆರೋಪಿಗೆ ಸೇರಿದ್ದು ಎಂದರೆ ಗೊತ್ತಿಲ್ಲ. ಸಂಪನ್ ದೊಡ್ಡಿ ಗ್ರಾಮದಲ್ಲಿ ನನಗೆ ಸೇರಿದ ಯಾವುದೇ ಮನೆ ಇಲ್ಲ ಎಂದರೆ ಸರಿಯಲ್ಲ. ನನ್ನ ಸ್ವತ್ತಿನ ದಾಖಲೆಗಳನ್ನು ಪೊಲೀಸರಿಗೆ ನಾನು ನೀಡಿಲ್ಲ. 1 ನೇ ಆರೋಪಿಗೆ ಸೇರಿದ ಸ್ವತ್ತನ್ನು ಲಪಟಾಯಿಸುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಹೊಡೆದಿಲ್ಲ ಎಂದರೆ ಸರಿಯಲ್ಲ.

ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿಲ್ಲ ಸದರಿ ದಾಖಲೆಗೆ ಠಾಣೆಯಲ್ಲಿ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಕನಕಪುರ**

**ಓ ಹೇ ಕೇ ಸ ಇ**